ನೀಡಲಾಗಿದೆ. ಅಲ್ಲದೆ ಸಂಬಂಧಪಟ್ಟ ಪುರಸಭಾ ಅಧಿಕಾರಿಗಳಿಗೆ ಕೂಡ ನೋಟೀಸ್ ನೀಡಲಾಗಿದೆ.

ಈ) ಮೇಲೆ ಸೂಚಿಸಿದಂತೆ ಕ್ರಮ ಜರುಗಿಸಲಾಗಿದೆ.

ಉ) ಈ ಬಗ್ಗೆ ಈಗಾಗಲೇ ನೀಡಲಾದ ನೋಟೀಸ್ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಹೊಸದಾಗಿ ಶೌಚಾಲಯ ಕಟ್ಟುವ ಬಗ್ಗೆ ಪ್ರಸ್ತಾವನೆಯನ್ನು ಪರಿಶೀಲಿಸುತ್ತಿದ್ದು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ತಿಳಿದುಬಂದಂತೆ 94-95ನೇ ಸಾಲಿನಲ್ಲಿ ಈ ಕಾರ್ಯವನ್ನು ಕೈಗೊಳ್ಳಲಾಗುವುದು. ನಿಗಧಿತ ಕಾಲಾವಧಿಯಲ್ಲಿ ಈ ಕಾರ್ಯವನ್ನು ಪೂರ್ಣಗೊಳಿಸದಿದ್ದಲ್ಲಿ ಕಾನೂನು ರೀತ್ಯ ಕ್ರಮ ಜರುಗಿಸಲಾಗುವುದು.

ಬೈಲಹೊಂಗಲ ತಾಲ್ಲೂಕಿನ ಹೊಸೂರು ಗ್ರಾಮದಲ್ಲಿ ಆಟದ ಮೈದಾನದ ಕೆಲಸ ಪೂರ್ಣಗೊಳಿಸುವ ಬಗ್ಗೆ

139 - ಶ್ರೀ ಶಿವಾನಂದ ಪೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಹೊಸೂರು ಗ್ರಾಮದಲ್ಲಿ ಭೂಸೇನಾ ನಿಗಮದವರು ಹೈಸ್ಕೂಲ್ ಹತ್ತಿರ ಆಟದ ಮೈದಾನ ಮಾಡಲು ಎಷ್ಟು ಹಣವನ್ನು ಬಿಡುಗಡೆ ಮಾಡಿರುವುದು?

ಆ) ಆಟದ ಮೈದಾನವನ್ನು ಪೂರ್ಣಗೊಳಿಸಲು ಇನ್ನು ಎಷ್ಟು ಹಣ ಬೇಕಾಗಿದೆ ಹಾಗೂ ಅದನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಹೆಚ್.ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಯುವಜನ ಸೇವಾ ಸಚಿವರು):

ಅ) ಈ ಆಟದ ಬಯಲನ್ನು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯು ಅಭಿವೃದ್ಧಿ ಪಡಿಸುತ್ತಿರುವುದಿಲ್ಲ. ಆದುದರಿಂದ ಮಾಹಿತಿ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಪ್ರಕಟಣೆ

ಅಧ್ಯಕ್ಷರು : ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ ೧೧೪ಎ ಮೇರೆಗೆ ವಿಧಾನ ಸಭೆಯಿಂದ ಅಂಗೀಕಾರವಾದ 1994ನೇ ಸಾಲಿನ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ದಿನಾಂಕ 14-2-94 ರಂದು ಅನುಮೋದಿಸಲಾಗಿದೆ ಎಂದು ತಿಳಿಸುತ್ತೇನೆ.

ಪ್ರಸ್ತಾವನೆ

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಒಂದು ಪ್ರಸ್ತಾವನೆಯನ್ನು ಸಭೆ ಮುಂದೆ ಮಂಡಿಸುತ್ತೇನೆ. "ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಪ್ರಯಾಣ ದರವನ್ನು ಮತ್ತು ಸಂಸ್ಥೆಯ ಕಾರ್ಯ ನಿರ್ವಹಣೆ ಮತ್ತು ಆಡಳಿತ ದಕ್ಷತೆಯನ್ನು ಉತ್ತಮಪಡಿಸುವ ಸಲುವಾಗಿ ಸರಕಾರಕ್ಕೆ ಸೂಕ್ತ ಶಿಫಾರಸ್ಸುಗಳನ್ನು ನೀಡಲು ರಚಿಸಲಾಗಿರುವ ವಿಧಾನ ಮಂಡಲದ ಜಂಟಿ

ವನ ಸಮಿತಿಯು ತನ್ನ ವರದಿಯನ್ನು ನೀಡಲು 1994ರ ಏಪ್ರಿಲ್ ತಿಂಗಳ ಅಂತ್ಯದವರೆಗೆ ಕಾಲಾವಕಾಶ ನೀಡಬೇಕು."

ಇದಕ್ಕೆ ಮಾನ್ಯ ಸಭೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಅಂಗೀಕಾರವಾಗಿದೆ.

ಶ್ರೀ ಬಿ. ಹೆಚ್. ಬನ್ನಿಕೋಡ್ : ನಿನ್ನೆ ದಿವಸ ನಿಲುವಳಿ ಸೂಚನೆ ಬಗ್ಗೆ ಪ್ರಸ್ತಾಪ ಮಾಡಿದ್ದೆವು. ಇವತ್ತು ಉತ್ತರ ಕೊಡಿಸುತ್ತೇವೆಂದು ಹೇಳಿದ್ದೀರಿ. ಅದರಂತೆ ತಾವು ಉತ್ತರ ಕೊಡಿಸಬೇಕು.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು

(1) ಮುಧೋಳದಲ್ಲಿ ರೈತರಿಗೆ ಆಗುತ್ತಿರುವ ತೊಂದರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಕಳೆದ ಮೂರು ದಿನದಿಂದ ಮುಧೋಳದಲ್ಲಿ ರೈತರಿಗೆ ಆಗುತ್ತಿರುವ ತೊಂದರೆ ಬಗ್ಗೆ ಕಬ್ಬು ಬೆಳೆಗಾರರ ಬಗ್ಗೆ ಪ್ರಸ್ತಾಪವನ್ನು ಈ ಸದನದಲ್ಲಿ ಮಾಡುತ್ತಿದ್ದೇವೆ. ಸಕ್ಕರೆ ಇಲಾಖಾ ಮಂತ್ರಿಗಳಾದ ಲಮಾಣಿಯವರು ಹೇಳಿಕೆ ಕೊಡುತ್ತೇನೆಂದು ಗುರುವಾರ ಆಶ್ವಾಸನೆ ಕೊಟ್ಟು ಹೋದರು. ಈಗ ಅವರು ನಾಪತ್ತೆ ಆಗಿದ್ದಾರೆ. ರೈತರಿಗೆ ತೊಂದರೆಯಾಗಿದೆ ಎಂದು ನಾವು ಹೇಳಿದ್ದೇವೆ. ಮುಧೋಳ ಮತ್ತು ಅದರ ಸುತ್ತಮುತ್ತ ಇರತಕ್ಕಂತಹ ರೈತರಿಗೆ ಬಹಳ ತೊಂದರೆಯಾಗಿದೆ. ಅಲ್ಲಿ ಕಬ್ಬು ಸಾಗಿಸುವುದಕ್ಕೆ ಪೊಲೀಸರು ಅಡ್ಡಿ ಬಂದು ಅವರನ್ನು ನಿಲ್ಲಿಸಿದ್ದಾರೆ. ಎಷ್ಟೊಂದು ಕಬ್ಬನ್ನು ಸುಟ್ಟು ಹಾಕಿದ್ದಾರೆಂಬುದರ ವಿವರವನ್ನು ತಮಗೆ ಕಳಿಸಿ ಕೊಡುತ್ತೇನೆ. ಲಾರಿ ಗಟ್ಟಲೆ ಕಬ್ಬನ್ನು ಬೆಂಕಿಗೆ ಹಾಕಿದ್ದಾರೆ. ಹೊರರಾಜ್ಯಗಳಿಗೆ ಅದನ್ನು ತೆಗೆದುಕೊಂಡು ಹೋಗುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ ಎಂದು ಒಪ್ಪಿದ್ದರು.

ಆದರೆ ಸೂಚನೆ ಹೋಗದೆ ರೈತರಿಗೆ ಬಹಳ ತೊಂದರೆಯಾಗಿದೆ. ಕತಾವು ಆಗಿರತಕ್ಕ ಕಬ್ಬು ಬಹಳವಾಗಿ ಬಾಕಿ ಇದೆ. ಇದರ ಬಗ್ಗೆ ಏನಾದರೂ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಇವತ್ತೇ ಸಾಯಂಕಾಲ ಹೇಳಿಕೆಯನ್ನು ಕೊಡುತ್ತೇನೆಂದು ಹೇಳಿದ್ದರು. ಜಿಲ್ಲಾಧಿಕಾರಿಗಳಿಗೆ ಮತ್ತು ಸಕ್ಕರೆ ನಿರ್ದೇಶಕರ ಜೊತೆ ಮಾತನಾಡುತ್ತೇನೆಂದು ಹೇಳಿದ್ದರು. ಆದರೆ ಇದುವರೆಗೆ ಏನೂ ಕ್ರಮವನ್ನು ತೆಗೆದೆಕೊಂಡಿಲ್ಲ. ಅವರೂ ಸಹ ಸಿಗುತ್ತಿಲ್ಲ.

ಶ್ರೀ ಹಾರನಳ್ಳಿ ರಾಮಸ್ವಾಮಿ (ಕಾನೂನು ಮತ್ತ್ತು ಸಂಸದೀಯ ವ್ಯವಹಾರಗಳ ಸಚಿವರು) : ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಿನ್ನೆಯೂ ತಾವು ಇದೇ ಉತ್ತರವನ್ನು ಕೊಟ್ಟಿದ್ದೀರಿ. ತಾವು ಸಂಸದೀಯ ವ್ಯವಹಾರದ ಮಂತ್ರಿಗಳು ಇವತ್ತು ಸಾಯಂಕಾಲದೊಳಗೆ ಉತ್ತರವನ್ನು ಕೊಡಿಸುತ್ತೇನೆಂದು ನಿನ್ನೆ ಹೇಳಿದ್ದಿರಿ. ನಾವು ನಿಮಗೇನು ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ನಿಮಗೆ 186 ಜನರ ಬೆಂಬಲವಿದೆ. ನಿನ್ನೆ ತಾವು ಸಂಜೆ 5 ಗಂಟೆಯೊಳಗೆ ಉತ್ತರವನ್ನು ಕೊಡಿಸುತ್ತೇನೆಂದು ಹೇಳಿದಿರಿ, ಇವತ್ತು ಸಹ ಅದನ್ನೇ ಹೇಳುತ್ತೀರಿ; ನಾವು ಸುಮ್ಮನೆ ಕೇಳಿಕೊಂಡು ಹೋಗಬೇಕಾಗಿದೆ.

ಶ್ರೀ ಹಾರನಳ್ಳಿ ರಾಮಸ್ವಾಮಿ : ನಿನ್ನೆ ಸಂಜೆ ಸಭೆಯು ತಕ್ಷಣ ಮುಕ್ತಾಯವಾಯಿತು. ನಿನ್ನೆ ಸಭೆಯು 7-8 ಗಂಟೆಯವರೆಗೆ ನಡೆಯುತ್ತದೆ. ನಮ್ಮ ಎಲ್ಲಾ ವಿಧೇಯಕಗಳನ್ನು ಪಾಸ್ ಮಾಡಬಹುದೆಂದು ತಿಳಿದುಕೊಂಡಿದ್ದೆವು. ಆಷ್ಟೊತ್ತಿಗೆ ಸಭೆ ತಕ್ಷಣವಾಗಿ ಮುಕ್ತಾಯವಾಯಿತು. ಮಾನ್ಯ ಸಕ್ಕರೆ ಸಚಿವರು ಇವತ್ತು ಬಂದಿದ್ದಾರೆ. ಅವರು ಈಗ ಮೇಲ್ಮನೆಯಲ್ಲಿದ್ದಾರೆ.